



ನೀಲಾಕಾಶ, ಪರ್ವತಗಳ ಚೆಲುವಿನ ಬಿಂಬ ಹೊತ್ತ 'ಮಿರರ್ ಲೇಕ್'

ಹರಡಿಕೊಂಡಿರುವ ಅದು ನಿಜವಾಗಿ ಸೌಂಡ್ ಅಲ್ಲ. ನದಿ ಕಣಿವೆಯಲ್ಲಿ ಕಡಲ ನೀರು ನುಗ್ಗಿ ಆವರಿಸಿರುವುದು ಸೌಂಡ್. ಹಿಮನದಿ (ಗ್ಲೇಸಿಯರ್) ಕೊರೆದು ಮಾಡಿದ ಆಳ ಕಣಿವೆಗಳಲ್ಲಿ ಕಡಲ ನೀರು ಹೊಕ್ಕು ರೂಪುಗೊಂಡಿರುವುದು ಫೋರ್ಡ್. 1823ರಲ್ಲಿ ಮೊದಲು ಇಲ್ಲಿಗೆ ಬಂದವನು ಆಸ್ಟ್ರೇಲಿಯಾದಲ್ಲಿ ನೆಲೆಯಾಗಿದ್ದ ಸಮುದ್ರಯಾನ ಸಾಹಸಿ ಜಾನ್ ಗ್ರೋನೋ. ಇಂಗ್ಲೆಂಡಿನ ವೇಲ್ಸ್‌ನಲ್ಲಿರುವ ಪ್ರಾಕೃತಿಕ ಬಂದರು ಮಿಲ್‌ಫೋರ್ಡ್ ಹೆಸರನ್ನೇ ಇದಕ್ಕೂ ಇಟ್ಟು ಸೌಂಡ್ ಎಂದು ಅವನು ಕರೆದದ್ದು ಹಾಗೆಯೇ ಮುಂದುವರೆದಿದೆ.

ಮಾವೊರಿ ಭಾಷೆಯಲ್ಲಿ ಇರುವ ಕಥೆಯೊಂದರ ಪ್ರಕಾರ ಮನುಷ್ಯ ಕುಲಕ್ಕೆ ಅಮರತ್ವ ದೊರಕಿಸಿಕೊಡಲು ಮೌಯಿ ಎಂಬ ಅವರ ಕುಲದ ವೀರನು ಈ ಪ್ರದೇಶಕ್ಕೆ ಏಕಾಂಗಿಯಾಗಿ ಬಂದ. ಆದರೆ ಹಿಂತಿರುಗಲಿಲ್ಲ. ಅವನ ಮರಣವನ್ನು ದುಃಖಿಸುತ್ತ ಪಿಯೊಪಿಯೊ ಹೆಸರಿನ ಹಕ್ಕಿ ಇಲ್ಲಿಗೆ ಹಾರಿ ಬಂದಿತಂತೆ. (ನ್ಯೂಜಿಲೆಂಡಿನಲ್ಲಿ ಈಗ ಅದು ಅಳಿದ ಪಕ್ಷಿ) 'ಒಂದು ಪಿಯೊಪಿಯೊ' ಎನ್ನುವ ಅರ್ಥದ ಪಿಯೊಪಿಯೊತಾಹಿ ಹೆಸರನ್ನೇ ಈ ತಾವಿಗೂ ಇಟ್ಟಿದ್ದಾರೆ. ಮೂಲನಿವಾಸಿ ಮಾವೊರಿಗಳಿಗೂ, ವಸಾಹತುಶಾಹಿ ಬ್ರಿಟಿಷರಿಗೂ ಈ ತಾವಿನ ಆಧಿಪತ್ಯಕ್ಕಾಗಿ ದೀರ್ಘ ಸಂಘರ್ಷ ನಡೆದಿದೆ. 1998ರಲ್ಲಿ ಆದ ವೈತಂಗಿ ಒಪ್ಪಂದದ ಬಳಿಕ ಹೆಸರನ್ನು ಮಿಲ್‌ಫೋರ್ಡ್ ಸೌಂಡ್ ಪಿಯೊಪಿಯೊತಾಹಿ ಎಂದು ಬದಲಿಸಲಾಗಿದೆ. ಅವು ಎರಡು ಹೆಸರುಗಳಲ್ಲ. ಅದಲುಬದಲು ಮಾಡಬಹುದಾದ ಹೆಸರುಗಳಲ್ಲ. ಪರ್ಯಾಯ ಹೆಸರುಗಳೂ ಅಲ್ಲ. ಅವೆರಡೂ ಸೇರಿ ಒಂದೇ ಹೆಸರಾಗಿದೆ.

ಎರಡು ಕಿ.ಮೀ. ಅಗಲ, 15 ಕಿ.ಮೀ. ಉದ್ದ, ಸಾವಿರಾರು ಅಡಿ ಆಳದ ಕಣಿವೆ ತುಂಬಿದ ಜಲರಾಶಿ ಪಿಯೊಪಿಯೊತಾಹಿ. 20 ಲಕ್ಷ ವರ್ಷ ಕಾಲ ಕಿ.ಮೀ.ಗಟ್ಟಲೆ ಅಗಲದ ಹಿಮನದಿಗಳು ದಕ್ಷಿಣ ಆಲ್ಪ್ಸ್ ಪರ್ವತಗಳಿಂದ ಕಡಲ ಕಡೆಗೆ ನಡೆದವು. ಭೂ ತಾಪಮಾನ ಏರುತ್ತ ಹೋದಂತೆ ಹಿಮ ಕರಗಿ ನಿಂತು ಭಾರೀ ಸರೋವರಗಳನ್ನೂ, ಫೋರ್ಡ್‌ಗಳನ್ನೂ ಸೃಷ್ಟಿಸಿತು. ಪರ್ವತಗಳಿಂದ ಇಳಿಯುತ್ತ ಹಿಮನದಿ ಹೊತ್ತು ತಂದ ಭಾರದ ಕಲ್ಲುಬಂಡೆಗಳ ರಾಶಿಯು ಟಾಸ್ಮನ್ ಕಡಲನ್ನು ಹಿಮನದಿಯು ಸೇರುವ 'ಬಾಯಿ'ಯ ಬಳಿ ಗುಡ್ಡೆ ಹಾಕಿತು. ಹಾಗಾಗಿ ಅಲ್ಲಿ ಸೌಂಡಿನ ಆಳ 29 ಮೀಟರ್ ಇದ್ದರೆ ಉಳಿದೆಡೆ 300, 400 ಮೀಟರು (1312 ಅಡಿ)ಗಳವರೆಗೂ ಇದೆ.

ವರ್ಷವಿಡೀ ಬೀಳುವ ಮಳೆನೀರು ಹಾಗೂ ಫೋರ್ಡನ್ನು ಸೇರುವ ನದಿಗಳ ನೀರು ಮೇಲ್ಮೈನಿಂದ ಆರು ಮೀಟರ್ ಆಳದವರೆಗೆ ನೀರು ಸಿಹಿಯಿರುವಂತೆ ಮಾಡಿವೆ. ಕೆಳಗೆ ಕಡಲ ಉಪ್ಪು ನೀರು ಇದೆ. ಪರ್ವತ, ದಟ್ಟಕಾಡುಗಳನ್ನು ದಾಟಿ ಬರುವ ನೀರಿನಲ್ಲಿ ಟ್ಯಾನಿನ್ ಇದ್ದು ಫೋರ್ಡಿಗೆ ಕಪ್ಪು ಬಣ್ಣ ತಂದುಕೊಟ್ಟಿದೆ.

ವರ್ಷಕ್ಕೆ 6412 ಮಿ.ಮೀ. (252 ಇಂಚು) ಮಳೆ ಬೀಳುವ ಪಿಯೊಪಿಯೊತಾಹಿ ಅತಿ ಹೆಚ್ಚು ಮಳೆ ಬೀಳುವ ಮನುಷ್ಯರ ವಾಸಸ್ಥಳಗಳಲ್ಲಿ ಒಂದು. ಇದು ಕರಾವಳಿಯ ಮಳೆಯೂರು ನಮ್ಮ ಹೊನ್ನಾವರದಲ್ಲಿ ಆಗುವ ಮಳೆಗಿಂತ ಎರಡು ಪಟ್ಟು ಹೆಚ್ಚು. ಕೆಲವೊಮ್ಮೆ ಒಂದೇ ದಿನ 250 ಮಿ.ಮೀ. (10 ಇಂಚು) ಮಳೆ ಬೀಳುತ್ತದೆ. ಸೆಪ್ಟೆಂಬರಿನಿಂದ ಡಿಸೆಂಬರ್‌ವರೆಗೆ ಅತ್ಯಧಿಕ ಮಳೆಯಾಗುತ್ತದೆ. ವರ್ಷದ ಎಲ್ಲ ತಿಂಗಳಿನಲ್ಲೂ, ಸರಾಸರಿ 182 ದಿನ ಮಳೆ ಬೀಳುತ್ತದೆ. ಈ ಮಳೆಯು ಕೋಡುಗಲ್ಲುಗಳ ತುದಿಯಿಂದ ಧುಮ್ಮಿಕ್ಕುವ ಅಸಂಖ್ಯ ಜಲಪಾತಗಳನ್ನು ಸೃಷ್ಟಿಸಿದೆ. ಸಣ್ಣಪುಟ್ಟ ನೀರಧಾರೆಗಳು ತಳ



ಹಿಮಚ್ಛಾದಿತ ಆಲ್ಪ್ಸ್ ಸೆರಗಿನಲ್ಲಿರುವ ಕ್ವೀನ್ಸ್‌ಟೌನ್‌ನ ಪಾರ್ಶ್ವನೋಟ